ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು:- ಈಗ ಶಿವಾನಂದ ಪಾಟೀಲ್ ರವರು 1995ನೇ ಸೆಪ್ಟೆಂಬರ್‌ನಿಂದ ಬಿಜಾಪುರ ಹಾಗೂ ರಾಜ್ಯದ ಇತರೆ ನಗರಸಭೆ : ಪುರಸಭೆಗಳಿಗೆ ಮನರಂಜನಾ ತೆರಿಗೆ ಹಾಗೂ ಸರ್‌ಚಾರ್ಜ್ ಆನ್ ಸ್ಟ್ಯಾಂಪ್ ಡ್ಯೂಟಿಯನ್ನು ಬಿಡುಗಡೆ ಮಾಡದಿರುವುದರಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ ಉಪಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಾರೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು):- ಉಪಾಧ್ಯಕ್ಷರೆ, ಈ ಬಗ್ಗೆ ಹೇಳಿಕೆಯನ್ನು ಮಧ್ಯಾಹ್ನ ನೀಡುತ್ತೇನೆ.

ಉಪಾಧ್ಯಕ್ಷರು:- ಈಗ ಕಾರ್ಯಕಲಾಪಗಳ ಪಟ್ಟಿಯಂತೆ ಬೇಡಿಕೆಗಳ ಮೇಲೆ ಮಾತನಾಡಬೇಕಾಗಿದೆ...

5) ನಿಯಮ 173ರ ಮೇರೆಗೆ ಚರ್ಚೆ

ವಿಷಯ:- ಬೇಡಿಕೆಗಳ ಪರ್‌ಫಾರ್ಮೆನ್ಸ್ ಬಜೆಟ್ ರಿಪೋರ್ಟನ್ನೂ ಒದಗಿಸದೇ ಇರುವ ಬಗ್ಗೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಬೇಡಿಕೆಗಳ ಮೇಲೆ ಮಾತನಾಡುವುದಕ್ಕಿಂತ ಮುಂಚೆ ನಿಯಮ 173 ಕೆಳಗೆ ನಾನು ಪ್ರಸ್ತಾಪ ಮಾಡಿದ್ದೆ. ಕೊನೆಯ ಪಕ್ಷ ನಿನ್ನೆ ಕೊಡಲಿಕ್ಕೆ ಆಗಲಿಲ್ಲ ಅಂತ ಅಂದರು, ಇವೊತ್ತು ಎಲ್ಲಾ ಬೇಡಿಕೆಗಳ ಮೇಲಿನ ಫರ್‌ಫಾರ್ಮೆನ್ಸ್ ಬಜೆಟ್‌ನ್ನು ಈ ಸದನದ ಮುಂದೆ ಇಡುತ್ತೇವೆ ಎಂದು ಹೇಳಿದ್ದರು. ನಿಯಮ 173ರ ಪ್ರಕಾರವಾಗಿ "the Annual Financial Statement or the Statement of the estimated Receipts and Expenditure of the Government in respect of each financial year (hereinafter referred to as the Budget) shall be presented to the House on such day as the Governor may direct." ಇದು ಆಯಿತು. ಮುಂದೆ ಯಾವುದು ಎಂದರೆ, ಡಿಮಾಂಡ್ಸ್ ಫಾರ್ ಗ್ರ್ಯಾಂಟ್ಸ್ ರೂಲ್ 174, 175 ಇದನ್ನು ಡೀಲ್ ಮಾಡುತ್ತದೆ. ಇದು ಯಾವ ಸಂದರ್ಭದಲ್ಲಿ, ಬಜೆಟ್ ಪ್ರೆಸೆಂಟ್ ಮಾಡುವುದಕ್ಕೆ ಪ್ರೊಸೀಜರ್ ಏನು ಎನ್ನತಕ್ಕಂಥದ್ದನ್ನು ಸೆಕ್ಷನ್ 173ರಲ್ಲಿ ಹೇಳುತ್ತರೆ. Procedure in financial matters ಹೇಗೆ ಬಜೆಟ್ ಪ್ರೆಸೆಂಟ್ ಮಾಡಬೇಕು ಎಂದು. ಇದು ಸೆಕ್ಷನ್ 173, 174, 175 ರೂಲನ್ನ ಭಾರತ ಸಂವಿಧಾನದ 202ನೇ ಅನುಚ್ಛೇದದ ಪ್ರಕಾರ Procedure to the Financial Matter ಇದರೊಳಗೂ ಕೂಡ ನಮ್ಮ ಈ ಪ್ರೊಸೀಜರನ್ನು ಅಳವಡಿಸಿಕೊಂಡಿದ್ದಾರೆ. ಅಂದರೆ ಯಾವಯಾವ ಡಾಕ್ಯುಮೆಂಟನ್ನು ಸದನದ ಮುಂದೆ ಇಡಬೇಕು, ಅದನ್ನು ಚರ್ಚೆ ಮಾಡುವಾಗ ಅಂದರೆ, ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಆ ವಾರ್ಷಿಕ ವರದಿಯ ಜೊತೆಯಲ್ಲೆ ಇದನ್ನು ಒದಗಿಸಿಕೊಡಬೇಕು ಎಂಬತಕ್ಕಂಥದ್ದನ್ನು

ಆರ್ಟಿಕಲ್ 202ರ ಆಧಾರದಮೇಲೆ ನಮ್ಮಲ್ಲಿ ಏನು ರೂಲ್ ಮಾಡಿದ್ದೇವೆ 173, 174, 175 ರೂಲ್ ಅದರ ಮೇರೆಗೆ ನೀವು ತಯಾರು ಮಾಡಿದಂಥ ನೀವೇ ಕೊಟ್ಟಂಥ ಡಾಕ್ಯುಮೆಂಟ್ಸ್ ಏನು ಇದೆ. An Introduction to the Budget. ಇದರಲ್ಲಿ ಅಧ್ಯಕ್ಷರೆ, ಪೇಜ್ 48(2)ರಲ್ಲಿ 202ನೇ ಆರ್ಟಿಕಲ್‌ನಲ್ಲಿ "Under Article 202 of the Constitutin of India, the Government is required to lay before the Legislature for every financial year, an Annual Financial Statement. This statement is none other than the Budget which is a term commonly used." (ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು) ನಾನು ಫರ್‌ದರ್ ಅದನ್ನು ಎಲಾಬರೇಟ್ ಮಾಡುವುದಕ್ಕೆ ಹೋಗುವುದಿಲ್ಲ. ಅಂದರೆ ನಮ್ಮ ಬಜೆಟರಿ ಡ್ಯಾಕುಮೆಂಟ್ ತಾವೇನು ಕೊಟ್ಟಿದ್ದೀರಿ, ಯಾವರೀತಿಯಾಗಿ ಈ ಬಜೆಟನ್ನು ನಾವು ಮಂಡಿಸುವಾಗ, ಬೇಡಿಕೆಗಳನ್ನು ಮಂಡಿಸುವಾಗ, ಅದರ ಜೊತೆಯಲ್ಲಿ ಯಾವ ಯಾವ ಕಾಗದಪತ್ರಗಳನ್ನು ಕೊಡಬೇಕು ಅದು ಸದನಕ್ಕೆ ಯಾವರೀತಿಯಾಗಿ ಉಪಯೋಗ ಆಗುತ್ತದೆ ಎನ್ನುವ ಮಾತನ್ನು ಇದರಲ್ಲಿ ತಾವೇ ಹೇಳಿದ್ದೀರಿ. ಮತ್ತು ಪೇಜ್ 49ರಲ್ಲಿ ಇರುವುದನ್ನು ನಾನು ಓದುತ್ತೇನೆ ಅಧ್ಯಕ್ಷರೆ, ಪರ್‌ಫಾರ್ಮೆನ್ಸ್ ಬಜೆಟಿಂಗ್ ಇದರಲ್ಲಿ ಏನು ಹೇಳುತ್ತದೆ ಎಂದರೆ "The present Budgetary system serves well the twin purpose of accountability to the Legislature and control of expenditure. However, it is inadequate as the Bill of amendment and evaluation of the performance in physical terms as it does not enable the Legislature to have a full appreciation of the programmes and activities of the Government and judge its accomplishment in their proper respective. "Further Adminstrative Reforms Commission set up by the Government of India, therefore recommended introduction of a Performance Budgeting. The Performance Budgets are presented to the Legislature in addition to the financial budget which in any case has to be presented in accordance with the provisions of the Constitution of India. Such performance budgets are particularl necessary in respect of the developmental departments." There is one more clause. It is stated clearly, "the State Government is preparing performance budgets in respect of certain develpmental departments

and is presnting them to the legislature. The other develpmental Departments will also be covered in due course." ಎಂದು ಹೇಳಿ ಇದರೊಳಗೆ ಹೇಳಿದ್ದಾರೆ. ಇದು ಮೊದಲನೆಯದು. ಹಿಂದೆ ತಯಾರು ಮಾಡಿದಂಥ ಹಳೆಯ ಪುಸ್ತಕವನ್ನು ನಾನು ತಂದಿದ್ದೇನೆ. ಹಿಂದಿನದು. ನಾನು ಹೇಳತಕ್ಕಂಥದ್ದು ಇಷ್ಟೆ, ಪರ್‌ಫಾರ್ಮೆನ್ಸ್ ಬಜೆಟ್ ಕಾಪಿಯಲ್ಲಿ ಸುಮಾರು 16 ಡಿಮ್ಯಾಂಡ್ಸ್ ಏನು ಇವೆ, ಈ 16 ಡಿಮ್ಯಾಂಡ್ಸ್‌ನಲ್ಲಿ ಕೊಟ್ಟಂಥ ಪರ್‌ಫಾರ್ಮೆನ್ಸ್ ಬಜೆಟ್ ಎಷ್ಟು ಇಲಾಖೆಗೆ ಅಂದರೆ, ಬೇಡಿಕೆ ಸಂಖ್ಯೆ 29 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು 28ರಲ್ಲಿ ವೈದ್ಯಕೀಯ ಶಿಕ್ಷಣ, ಆಮೇಲೆ ಡಿಮ್ಯಾಂಡ್ 14 ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ, ಡಿಮ್ಯಾಂಡ್ ನಂ. 10 ಲೇಖನ ಸಾಮಗ್ರಿ ಮತ್ತು ಮುದ್ರಣ, ಡಿಮ್ಯಾಂಡ್ ನಂ. 30. ಮಾತ್ರ 31, 23, 25, 24, 37, 38, 60, 51, 47, 32, 35, 36 ಮತ್ತು 46 ಇಷ್ಟು ಡಿಮ್ಯಾಂಡ್‌ಗೆ ತಮ್ಮ ಪರ್‌ಫಾರ್ಮೆನ್ಸ್ ಬಜೆಟ್‌ಗೆ ಸಂಬಂಧಪಟ್ಟಂತೆ ಕಾಗದಪತ್ರಗಳು ಈ ಸದನದ ಮುಂದೆ ಇಲ್ಲ ಅದಕ್ಕಾಗಿ ಇಲ್ಲಿ ಯಾವುದು ನಮ್ಮ ಅಧಿಕಾರ ಇದೆ, ನಮಗೆ ಹಕ್ಕು ಇದೆ ಆ ಪತ್ರಗಳನ್ನು ಇಲ್ಲಿ ಇಡಬೇಕು, ಆ ಪತ್ರದ ಆಧಾರದಮೇಲೆ, ತಾವು ಕೊಟ್ಟಂಥ ಪರ್‌ಫಾರ್ಮೆನ್ಸ್ ಬಜೆಟ್ ಆಧಾರದಮೇಲೆ ಇಲ್ಲಿ ಚರ್ಚೆ ಆಗಬೇಕು. ಏಕೆಂದರೆ ಅದರ ಅಕೌಂಟಬಲಿಟಿ ಇರುತ್ತದೆ. ನೀವು ಕೊಟ್ಟಂಥ ಫಿಜಿಕಲ್ ಟಾರ್ಗೆಟ್ ಏನು? ಫೈನಾನ್‌ಸಿಯಲ್ ಟಾರ್ಗೆಟ್ ಏನು? ಬಜೆಟ್ ಅಲೊಕೇಷನ್ ಏಷ್ಟು ಈ ವರ್ಷ ಫರ್‌ಫಾರ್ಮ್ ಮಾಡಿದ್ದು ಎಷ್ಟು ಎನ್ನತಕ್ಕಂಥದ್ದು ಅದರಲ್ಲಿ ಇದ್ದ ಕಾರಣ ಅದನ್ನು ಅಭ್ಯಾಸ ಮಾಡಿಕೊಂಡು ತಮಗೆ ಹೇಳತಕ್ಕಂಥ ಸಾಧ್ಯತೆ ಇರುತ್ತದೆ. ಅದಕ್ಕಾಗಿ ಅಧ್ಯಕ್ಷರೆ, ಇವೊತ್ತು ಒಂದು ಕಡೆ ರೂಲ್‌ನಲ್ಲಿ ಪ್ರಾವಿಷನ್ ಇದೆ, ಸಂವಿಧಾನದಲ್ಲೂ ಕೂಡ ಪ್ರಾವಿಷನ್ ಇದೆ ಮತ್ತು ಈ ನಮ್ಮ ಇಂಟ್ರುಡಕ್ಷನ್ ಟು ದಿ ಬಜೆಟ್ ಹೇಗೆ ಮಾಡಬೇಕು ಎನ್ನತಕ್ಕಂಥದ್ದರಲ್ಲಿ ನೀವು ಕೊಟ್ಟಂಥ ಡಾಕ್ಯುಮೆಂಟ್‌ನಲ್ಲೂ ಕೂಡ ಇದರ ಬಗ್ಗೆ ನಮೂದು ಮಾಡಿದ್ದಾರೆ. ಇಷ್ಟು ಇದ್ದರೂ ಕೂಡ ಸರ್ಕಾರ ಏಕೆ ಅಲಕ್ಷ್ಯ ಮಾಡಿದೆ ಈ ಡಾಕ್ಯುಮೆಂಟನ್ನು ಪ್ರಿಂಟ್ ಮಾಡಿ ಕೊಡಲಿಕ್ಕೆ ತೊಂದರೆ ಏನು ಎಂದು ನನಗೆ ಅರ್ಥವಾಗುತ್ತಾ ಇಲ್ಲ. ಏನು ಅವರ ಹುಳುಕು ಗೊತ್ತಾಗುತ್ತದೆ ಎಂದು ಮಾಡಲಿಲ್ಲವೋ ಅಥವಾ ಇದರ ಬಗ್ಗೆ ಚರ್ಚೆ ಆಗಬಾರದು ಎಂಬತಕ್ಕಂತದ್ದು ಇದೆಯೋ ಎನ್ನತಕ್ಕಂಥದ್ದು ನಮಗೆ ಹೇಳಬೇಕು. ನಿನ್ನೆ ತಾವು ಇರಲಿಲ್ಲ, ಇದರ ಬಗ್ಗೆ ನಾನು ಪ್ರಸ್ತಾಪ ಮಾಡಿದೆ ಉತ್ತರ ಕೊಡತಕ್ಕಂಥವರು ಯಾರು ಇರಲಿಲ್ಲ, ನಮ್ಮ ಬಚ್ಚೇಗೌಡರು ಇದ್ದರು ಮತ್ತು ಶಾಣಪ್ಪನವರು ಇದ್ದರು ಅವರು ನಾಳೆ ಒದಗಿಸಿಕೊಡುತ್ತೇವೆ ಎಂದರು. ಮತ್ತೆ ಆಮೇಲೆ ಬಚ್ಚೇಗೌಡರು ಏನು ಹೇಳಿದರು, ನಾಲ್ಕು ಡಿಪಾರ್ಟ್‌ಮೆಂಟ್‌ನದು ಕೊಟ್ಟಿದ್ದೇವೆ, ಉಳಿದ ಇಲಾಖೆಯದು ಯಾವಾಗ ಕೊಡುತ್ತೇವೊ ಗೊತ್ತಿಲ್ಲ ಬಂದಮೇಲೆ ನಾವು ಒದಗಿಸಿಕೊಡುತ್ತೇವೆ ಎಂದು ಹೇಳಿದರು. ಅಂದರೆ ಚರ್ಚೆ ಮಾಡುವುದಕ್ಕಿಂತ ಮುಂಚೆಯಾದರೂ ಅದನ್ನು ಒದಗಿಸಿಕೊಡಬೇಕೆಂಬ ಉದ್ದೇಶ ಅವರಿಗಿದೆ. ಆದರೆ ಚರ್ಚೆ ಪ್ರಾರಂಭವಾಗಿ ಮೂರು ದಿವಸ ಆಯಿತು ಮೂರು ದಿವಸ ಆದರೂ ಕೂಡ ಈ

ಡಾಕ್ಯುಮೆಂಟಗಳನ್ನು ಸದನದ ಮುಂದೆ ಇಡಬೇಕು ಎನ್ನತಕ್ಕಂಥ ಒಂದು ವ್ಯವಸ್ಥೆಯು ಕೂಡ ಆಗದೇ ಹೋದರೆ, ಯಾವರೀತಿಯಾಗಿ ಚರ್ಚೆಗೆ ಬೆಲೆ ಇದೆ ಮತ್ತು ಎಷ್ಟು ಹಗುರವಾಗಿ ಸದನವನ್ನು ಸರ್ಕಾರ ತೆಗೆದುಕೊಂಡಿದೆ ಎನ್ನತಕ್ಕಂಥದ್ದಕ್ಕೆ ಇದು ಒಂದು ಉದಾಹರಣೆ. ಅದಕ್ಕೆ ದಯವಿಟ್ಟು ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕು ಮತ್ತು ಅವರು ಫರ್‌ಫಾರ್ಮೆನ್ಸ್ ಬಜೆಟ್ ಇಡುತ್ತಾರೋ ಬಿಡುತ್ತಾರೋ ಇದು ಚರ್ಚೆ ಮಾಡತಕ್ಕಂಥದ್ದು ಸೂಕ್ತ ಎಂದು ತಾವು ಹೇಳಿದರೆ, ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಸಂವಿಧಾನದಲ್ಲೂ ಕೂಡ ಇದರ ಬಗ್ಗೆ ಯಾವ ಯಾವ ಡ್ಯಾಕ್ಯುಮೆಂಟ್‌ಗಳನ್ನು ಇಡಬೇಕು ಎಂದು ಇದೆ. ಅದಕ್ಕೆ ದಯವಿಟ್ಟು ತಾವು ಇದರ ಬಗ್ಗೆ ರೂಲಿಂಗ್ ಕೊಟ್ಟು ಮುಂದಿನ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರೆ ಒಳ್ಳೆಯದಾಗುತ್ತದೆ. ಇಲ್ಲ ಎಂದರೆ ಇದೇ ರೀತಿಯಾಗಿ ಪ್ರತಿಯೊಂದನ್ನು ಹಗುರವಾಗಿ ತೆಗೆದುಕೊಂಡು ಹೋದರೆ, ಈ ಸದನದ ಏನೊಂದು ಗಾಂಭೀರ್ಯ ಅಥವಾ ಡಿಸ್ಕಷನ್‌ನಲ್ಲಿ ಸೀರಿಯಸ್‌ನೆಸ್ ಇದೆ ಇದು ಉಳಿಯುವುದಿಲ್ಲ ಎಂಬ ಮಾತನ್ನು ಕೂಡ ಹೇಳುತ್ತೇನೆ. ಈ ಚರ್ಚೆಗೆ ಒಂದು ಸೀರಿಯಸ್‌ನೆಸ್ ಬರಬೇಕು ಎಂದರೆ ಪರ್‌ಫಾರ್ಮನ್ಸ್ ಬಜೆಟ್ ಸದನದ ಮುಂದೆ ಇಡಲಿಲ್ಲವೆಂದರೆ ಗೌವರ್ನಮೆಂಟ್ ಲ್ಯಾಪ್ಸಸ್ ಕೂಡ ಗೊತ್ತಾಗುವುದಿಲ್ಲ. ನಾವು ಏನು ಸಲಹೆ ಮಾಡಬೇಕೆಂದು ಇರುತ್ತೇವೆ, ಅದಕ್ಕೂ ಕೂಡ ಅವಕಾಶವಿರುವುದಿಲ್ಲವೆನ್ನುವ ಮಾತನ್ನು ತಮ್ಮ ಮುಖಾಂತರ ನಾನು ಹೇಳುತ್ತೇನೆ. ಆದುದರಿಂದ ದಯಮಾಡಿ ತಾವು ಇದರ ಬಗ್ಗೆ ಒಂದು ರೂಲಿಂಗ್ ಕೊಟ್ಟು ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ನಾನು ಶೂನ್ಯ ವೇಳೆಯಲ್ಲಿ ಇರುವಂತಹ ಅವಕಾಶವನ್ನು ಉಪಯೋಗ ಮಾಡಿಕೊಂಡು ಒಂದು ಮಾತು ಹೇಳುತ್ತೇನೆ. ಈ ಪರ್‌ಫಾರ್ಮನ್ಸ್ ಬಜೆಟ್ ರಿಪೋರ್ಟ್ ಇರಬಹುದು ಅಥವಾ ವಾರ್ಷಿಕ ವರದಿ ಇರಬಹುದು. ಈಗ ನಮಗೆ ಕೆಲವು ಇಲಾಖೆಯ ವಾರ್ಷಿಕ ವರದಿಗಳು ಸಿಕ್ಕಿವೆ. ಮೂರು ಇಲಾಖೆಗಳಿಗೆ ಸಂಬಂಧಪಟ್ಟಂತೆ ಪರಫಾರ್ಮನ್ಸ್ ಬಜೆಟ್ ಮಾತ್ರ ಬಂದಿದೆ. ಇವತ್ತು ಇರತಕ್ಕಂಥ ಬೇಡಿಕೆಗಳಲ್ಲಿ ಒಂದಕ್ಕೆ ಮಾತ್ರ ಬಂದಿದೆ. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತೆ ಚರ್ಚೆ ಅರ್ಥಗರ್ಭಿತವಾಗಿರಬೇಕು. ನಾವು ನೋಡಿದಂತೆ ಕಳೆದ ಹತ್ತಾರು ವರ್ಷಗಳಿಂದ ಯಾವುದೋ ಒಂದೆರಡು ಇಲಾಖೆಗೆ ಸಂಬಂಧಪಟ್ಟದ್ದು ಇರುತ್ತಿರಲಿಲ್ಲ. ಆಗ ನಾವು ಕೇಳಿದ ತಕ್ಷಣ ಅದನ್ನು ಒದಗಿಸುವಂತಹ ಪ್ರಯತ್ನವಾಗುತ್ತಿತ್ತು. ಆದರೆ ಈಗ ಇಲ್ಲಿ ಇದನ್ನು ಕಳೆದ 6-7 ದಿವಸಗಳಿಂದ ನಿಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತಂದರೂ ಕೂಡ, ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳದೇ ತುಂಬ ಹಗುರವಾಗಿ ಸದನವನ್ನು ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತಿದೆ. ಏತಕ್ಕೋಸ್ಕರ ಈ ಕಡೆಗೆ ವಿಶೇಷವಾದಂತಹ ಗಮನವನ್ನು ಸರ್ಕಾರ ಕೊಡುತ್ತಿಲ್ಲ? ಇಲ್ಲದಿದ್ದರೆ ಸರ್ಕಾರ ಬದುಕಿದೆಯೋ, ಅಥವ ಇಲ್ಲವೋ, ಪರ್‌ಫಾರ್ಮನ್ಸ್

ಆಗಿದೆಯೋ ಅಥವ ಇಲ್ಲವೋ, ಏನು ಕೆಲಸವಾಗಿದೆ ಎಂದು ನೋಡಿಕೊಂಡು ಚರ್ಚೆ ಪ್ರಾರಂಭಿಸೋಣ. ಪ್ರತಿ ಇಲಾಖೆಗೆ ಸಂಬಂಧಪಟ್ಟಂತೆ, ಕೆಲವು ಆಯ್ಕೆ ಮಾಡಿಕೊಂಡು ನಾವು ಇಲ್ಲಿ ಕೇಳುತ್ತಾ ಇದ್ದೇವೆ. ಸಂಪೂರ್ಣವಾಗಿ ನಾವು ಕೇಳುವುದಿಲ್ಲ. ನಾವು ಇಲ್ಲಿ ಯಾವುದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇವೆ. ಅದರ ಬಗ್ಗೆ ಸಹ ಈ ಪರಫಾರ್ಮನ್ಸ್ ಮತ್ತು ವಾರ್ಷಿಕ ವರದಿ ಇದ್ದರೆ, ಚರ್ಚೆಗೆ ಅನುಕೂಲವಾಗುತ್ತಿತ್ತು. ನಿನ್ನೆ ಮಾನ್ಯ ಬಚ್ಚೇಗೌಡರು ಉತ್ತರ ಕೊಟ್ಟಂತಹ ಸಂದರ್ಭದಲ್ಲಿ ನಾನು ಇಲ್ಲಿ ಇರಲಿಲ್ಲ. ಅವರು ಬಂದಾಗ ಕೊಡುತ್ತೇವೆ, ಚರ್ಚೆ ಮಾಡಿ ಇಲ್ಲದಿದ್ದರೆ ಹೋಗಿ ಎಂದು ಹೇಳಿದ್ದಾರೆ. ಎಲ್ಲವನ್ನು ಗಿಲೋಟಿನ್‌ಗೆ ಹಾಕಿ ಪಾಸ್ ಮಾಡಿಕೊಳ್ಳಬೇಕೆನ್ನುವ ಉದ್ದೇಶವಿದ್ದರೆ ಚರ್ಚೆಯ ಅಗತ್ಯವೇ ಇಲ್ಲ. ಹಾಗೆಯೇ ಬೇಕಾದರೆ ಪಾಸ್ ಮಾಡಿಕೊಳ್ಳಲಿ, ಇಲ್ಲದಿದ್ದರೆ ಇದು ಅರ್ಥಗರ್ಭಿತವಾಗಿ ಚರ್ಚೆಯಾಗಬೇಕೆನ್ನುವ ಉದ್ದೇಶ ಇದ್ದರೆ ಅವರ ಸಮಸ್ಯೆ ಏನು, ಏಕೆ ಇದನ್ನು ಒದಗಿಸುವುದಕ್ಕೆ ಆಗಿಲ್ಲ, ಎಂಬುದನ್ನು ನಮಗೆ ಸ್ಪಷ್ಟಪಡಿಸಬೇಕು.

ಶ್ರೀ ಬಿ.ವಿ.ಶ್ರೀರಾಂರೆಡ್ಡಿ:- ಮಾನ್ಯ ಅಧ್ಯಕ್ಷರೆ, ಹೋದಸಾರಿ ಸದನ ನಡೆದಂತಹ ಸಂದರ್ಭದಲ್ಲಿ ಲೇಖಾನುದಾನವನ್ನು ಪಡೆದುಕೊಳ್ಳುವಂತಹ ಸಂದರ್ಭದಲ್ಲಿ ಸರ್ಕಾರದವರು ಹೇಳಿದ್ದೇನೆಂದರೆ, ಪೂರ್ಣ ಬಜೆಟ್ ಚರ್ಚೆ ಮಾಡಿ ಅದನ್ನು ಪಡೆಯಲು ಕಾಲಾವಕಾಶ ಇಲ್ಲ. ಅದಕ್ಕೋಸ್ಕರ ಲೇಖಾನುದಾನವನ್ನು ಮಂಡಿಸುತ್ತಿದ್ದೇವೆ. ಆದುದರಿಂದ ಸದನ ಇದಕ್ಕೆ ಒಪ್ಪಿಕೆ ಕೊಡಬೇಕೆಂದು ಪೂರ್ಣ ಪ್ರಮಾಣದ ಚರ್ಚೆ ಮುಂದೆ ಆಗಬೇಕೆನ್ನುವಂತಹ ದಿಸೆಯಲ್ಲಿ ಲೇಖಾನುದಾನವನ್ನು ತೆಗೆದುಕೊಂಡರು. ಲೇಖಾನುದಾನವನ್ನು ತೆಗೆದುಕೊಂಡ ಮೇಲೆ ಈ ಸದನದಲ್ಲಿ ವಿವರವಾದ ಮತ್ತು ಗಂಭೀರವಾದ ಚರ್ಚೆಯಾಗಬೇಕಾಗಿದೆ. ಇಡೀ ಸರ್ಕಾರದ ವ್ಯವಸ್ಥೆಯ ಪ್ರಮುಖವಾದಂತಹ ಅಂಗ, ಮತ್ತೆ ಇಡೀ ರಾಜ್ಯದ ವ್ಯವಸ್ಥೆ ಆದರ ಆಗು ಹೋಗುಗಳ ಬೆಳವಣಿಗೆ, ಆಯವ್ಯಯ ಎಲ್ಲವನ್ನು ಗಂಭೀರವಾಗಿ ಚರ್ಚೆ ಮಾಡಿ, ರಾಜ್ಯದ ಪ್ರಾಮುಖ್ಯವಾದ ಅಭಿವೃದ್ಧಿ ಕೆಲಸ ನಡೆಯಬೇಕಾದಂತಹ ಸಂದರ್ಭದಲ್ಲಿ ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದೆ. ಉದಾಹರಣೆಗೆ ಇವತ್ತು ಕಾರ್ಯಕಲಾಪದ ಪಟ್ಟಿಯಲ್ಲಿ 19 ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹಾಕಲಾಗಿದೆ. ಈಗ 19 ಬೇಡಿಕೆಗಳಲ್ಲಿ ಐದನ್ನು ಮಾತ್ರ ಮಾರ್ಕ್ ಮಾಡಿ ಚರ್ಚೆಗೆ ತೆಗೆದುಕೊಂಡು ಬನ್ನಿ ಎಂದು ಹೇಳಿದರೆ ಅದರಲ್ಲಿ ಮೂರಕ್ಕೆ ಮಾತ್ರ ಇದೆ. ಇದರಲ್ಲಿ ಯಾವ ವಿಷಯವನ್ನು ಚರ್ಚೆ ಮಾಡಬೇಕು? ಯಾವ ರೀತಿ ಚರ್ಚೆ ಮಾಡಬೇಕು? ನೀವು ಕೂಡ ನಾಲ್ಕು ದಿವಸಗಳ ಹಿಂದೆ ಸರ್ಕಾರಕ್ಕೆ ಸೂಚನೆಯನ್ನು ಕೊಟ್ಟಿದ್ದೀರಿ. ಎಲ್ಲಾ ಇಲಾಖೆಗಳ ವರದಿಯನ್ನು ಈ ಸದನದಲ್ಲಿ ಮಂಡಿಸಬೇಕೆಂದು ಹೇಳಿದ್ದೀರಿ. ಇದುವರೆಗೂ ಕೂಡ ಎಲ್ಲಾ ವರದಿಗಳನ್ನೂ ಕೊಟ್ಟಿಲ್ಲ. ಮತ್ತೆ ಈ ಪರ್ಫಾಮನ್ಸ್ ಬಜೆಟನ್ನು ಕೊಟ್ಟಿಲ್ಲ. ನಾವು ಹೇಗೆ ಚರ್ಚೆ ಮಾಡಬೇಕೆಂದು ತಾವು ತೀರ್ಪು ಕೊಡಬೇಕು. ಸರ್ಕಾರ ಏಕೆ ಈ ರೀತಿ ಉದಾಸೀನ ಮನೋಭಾವವನ್ನು ಈ ಚರ್ಚೆಯ ಬಗ್ಗೆ ತೋರಿಸುತ್ತಿದೆಯೆಂಬುದನ್ನು ಸರ್ಕಾರ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಸರ್ಕಾರದ ಬಗ್ಗೆ ಗುಮಾನಿ ಬರುತ್ತದೆ.

ಏತಕ್ಕಾಗಿ ಸಮಗ್ರವಾದಂತಹ ಚರ್ಚೆಗೆ ಸರ್ಕಾರವು ಅನುವು ಮಾಡಿಕೊಡುತ್ತಿಲ್ಲ? ಉದ್ದೇಶಪೂರ್ವಕವಾಗಿಯೇ ಅನುವು ಮಾಡಿಕೊಡಲು ತಯಾರಿಲ್ಲವೆಂದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದ್ಯಸರುಗಳು ನಿನ್ನೆಯೂ ಕೂಡ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಪರ್‌ಫಾರ್ಮನ್ಸ್ ಬಜೆಟ್, ಎಲ್ಲಾ ಇಲಾಖೆಯದು ಸದನದ ಮುಂದೆ ಇಡಬೇಕು. ಇದರ ಜೊತೆಗೆ ವಾರ್ಷಿಕ ವರದಿಯನ್ನು ಇಡಬೇಕು. ಇಲಾಖೆಗಳ ಬೇಡಿಕೆಯ ಮೇಲೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಕಾನೂನಿನ ರೀತ್ಯಾ ನಿಯಮಾವಳಿಗಳ ರೀತ್ಯ ಇಡಬೇಕೆಂದು ಹೇಳಿದರು. ಈಗ ಹೊಸ ಪದ್ದತಿ ಬಂದಮೇಲೆ ಪ್ರತಿ ಇಲಾಖೆಗಳ ವಿಷಯ ಸಮಿತಿಗಳು ಆದ ಮೇಲೆ, ಬಹಳ ಧೀರ್ಘವಾಗಿ ಅಲ್ಲಿ ಚರ್ಚೆಯಾಗಿರುತ್ತದೆ. 5 ವರ್ಷಗಳಲ್ಲಿ ನಡೆದಿರುವಂತಹ ಪರ್‌ಫಾರ್ಮನ್ಸ್ ಬಗ್ಗೆ ಕೂಡ ಚರ್ಚೆಯಾಗಿರುತ್ತದೆ.

ಅದರ ಆಧರದ ಮೇಲೆ ವರದಿಯನ್ನು ಕೂಡ ಈ ವಿಷಯ ಸಮಿತಿಗಳು ಸದನಕ್ಕೆ ಇಟ್ಟಿರುತ್ತವೆ. ವಿಷಯ ಸಮಿತಿಗಳು ಕೊಟ್ಟಿದೆ, ಹಾಗೆಂದು ಕೊಡಬಾರದೆಂದು ನನ್ನ ಅಭಿಪ್ರಾಯವಲ್ಲ. ಇದನ್ನು ಕೊಡಬೇಕಾಗುತ್ತದೆ. ಕೆಲವು ಇಲಾಖೆಗಳ ಪರ್‌ಫಾರ್ಮನ್ಸ್ ಬಜೆಟ್ ಅನ್ನು ಇಟ್ಟದ್ದೇವೆ. ಬಹುತೇಕ ಇಲಾಖೆಗಳ ವಾರ್ಷಿಕವರದಿ ಕೂಡ ಇಟ್ಟಿದ್ದಾರೆ. ಆದುದರಿಂದ ವಿಷಯ ಸಮಿತಿಗಳು ಬಹಳಷ್ಟು ಆಳವಾಗಿ ಅಧ್ಯಯನ ಮಾಡಿ ಪ್ರತಿ ಇಲಾಖೆಯಲ್ಲಿರುವಂತಹ ನ್ಯೂನ್ಯತೆಗಳನ್ನು ಸಲಹೆಗಳ ರೂಪದಲ್ಲಿಟ್ಟು, ಏನು ಆಗಬೇಕೆಂಬುದನ್ನು ಕೊಟ್ಟಿರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಈ ವಿಷಯ ಸಮಿತಿಗಳಿಗೂ, ಈ ಫರ್‌ಫಾರ್ಮನ್ಸ್ ಬಜೆಟ್‌ಗೂ ಅಜಗಜಾಂತರ ವ್ಯತ್ಯಾಸವಿದೆ. ಅಲ್ಲಿ ಏನಾಗಿದೆ, ಏನು ಪ್ರೊಗ್ರೆಸ್ ಆಗಿದೆ, ಎನ್ನುವುದು ನಮಗೆ ಬೇಕೆಂದರೆ ನೀವು ವಿಷಯ ಸಮಿತಿಯ ಬಗ್ಗೆ ಪ್ರಸ್ತಾಪ ಮಾಡಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಈ ವರ್ಷ ಪರ್‌ಫಾರ್ಮನ್ಸ್ ಬಜೆಟ್ ಕೊಡಬೇಕು. 1995-96ನೇ ಸಾಲಿನಲ್ಲಿ ಪ್ರತಿ ಇಲಾಖೆಯ ಚರ್ಚೆಯಾಗುವಾಗ ಏನಾಗಿದೆ ಎಂಬುದನ್ನು ಪ್ರತಿ ಇಲಾಖೆಯಲ್ಲಿ ಇರಬೇಕು. ವಿಷಯ ಸಮಿತಿಯಲ್ಲಿ ಇದು ಸೇರಿ ಚರ್ಚೆಯಾಗಿರುತ್ತದೆ. ಅವರು ವರದಿಯನ್ನು ಕೊಟ್ಟಿರುತ್ತಾರೆ. ಅದು ಏನೇ ಇರಲಿ, ಯಾವ ಇಲಾಖೆಯ ಪರ್‌ಫಾರ್ಮನ್ಸ್ ಬಜೆಟ್ ಬಂದಿಲ್ಲ, ವಾರ್ಷಿಕವರದಿ ಬಂದಿಲ್ಲ, ಮಂಡಿಸುವಂತಹ ವ್ಯವಸ್ಥೆ ಮಾಡುತ್ತೇನೆ. ಇದರಲ್ಲಿ ಸರ್ಕಾರ ಉದಾಸೀನ ಮಾಡಬೇಕು ಅಥವಾ ಯಾವುದೇ ಅಂಶಗಳನ್ನು ಮುಚ್ಚಿಡಬೇಕು ಎನ್ನುವಂತಹ ಉದ್ದೇಶ ಇಲ್ಲ

ಅಧ್ಯಕ್ಷರು:- ನೀವು ಮುಚ್ಚಿಬೇಕೆನ್ನುವ ಉದ್ದೇಶವಿಲ್ಲ, ಆದರೆ ಅವರು ಚರ್ಚೆ ಮಾಡುವಾಗ ಇವು ಇಲ್ಲದೆ ಹೋದರೆ ಪರಿಣಾಮವೇನಾಗುತ್ತೆ. ಅವರು ಹೇಳಿದರೂ

ಎಂದು ನೀವು ಹೇಳಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ:- ಅವರು ಹೇಳಿದರು ಎನ್ನುವಂತಹ ಉದ್ದೇಶದಿಂದ ಅಲ್ಲ. ಅವರು ಹೇಳುತ್ತಾರೆಂದೂ ಎಂದು ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ಫರ್‌ಫಾರ್ಮನ್ಸ್ ಬಜೆಟ್ ಕೊಟ್ಟಿದ್ದರೆ, ನಾವು ಅದನ್ನು ಓದಿಕೊಂಡು ಬಂದು ಅದರಲ್ಲಿ ಏನಿದೆ ಎಂಬುದನ್ನು ಹೇಳುತ್ತೇವೆ. ಇದರಲ್ಲಿ ಮುಚ್ಚಿಡಬೇಕು ಏನುವಂಥಾದ್ದು ಏನಿಲ್ಲ.

ಶ್ರೀ ಸಿದ್ದರಾಮಯ್ಯ:- ಸರ್ಕಾರಕ್ಕೆ ಇದನ್ನು ಮುಚ್ಚಿಡಬೇಕೆಂಬ ಉದ್ದೇಶವಿಲ್ಲ. ಆ ಅಭಿಪ್ರಾಯವೇ ಇಲ್ಲ. ಮಾನ್ಯ ಶ್ರೀರಾಂರೆಡ್ಡಿಯವರು ಸರ್ಕಾರ ಕೆಲವು ವಿಚಾರಗಳನ್ನು ಮುಚ್ಚಲಿಕ್ಕೆ ಮಾಡುತ್ತಿದೆ ಎಂದು ಹೇಳಿದರು.

ಶ್ರೀ ಬಿ.ವಿ. ಶ್ರೀರಾಂರೆಡ್ಡಿ:- ವಿಷಯಗಳನ್ನು ಮುಚ್ಚಿಲಿಕ್ಕೆ ಎಂದು ಅಲ್ಲ, ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿ ಎಂದ ಹೇಳುತ್ತಿದ್ದೇನೆ.

ಅಧ್ಯಕ್ಷರು:- ಅವರು ನಿಮ್ಮ ಸಪೋರ್ಟಿಗೆ ಬಂದ ದಿವಸ ಹಾಗೆ ಮಾತನಾಡುವುದು

ಶ್ರೀ ಸಿದ್ದರಾಮಯ್ಯ:- ಸಪೋರ್ಟ್ ಎಂದು ಅಲ್ಲ, ಅವರು ಆರೋಗ್ಯಕರವಾದಂತಹ ಟೀಕೆಯನ್ನು ಮಾಡುತ್ತಾರೆ. ಆದ್ದರಿಂದ ಅದನ್ನು ಒದಗಿಸುವಂತಹ ಕೆಲಸವನ್ನು ಮಾಡುತ್ತೇವೆ. ಈಗ 3-4 ಇಲಾಖೆಗಳನ್ನು ಬಿಟ್ಟರೆ ಉಳಿದ ವಾರ್ಷಿಕ ವರದಿಗಳು ಬಂದಿಲ್ಲ. ಬಾಕಿಯವು ಬಂದ ಕೂಡಲೇ ಒದಗಿಸುವಂತಹ ಕೆಲಸ ಮಾಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- 3-4 ಇಲಾಖೆಗಳು ಬಿಟ್ಟರೆ ಅಲ್ಲ. 3-4 ಇಲಾಖೆಗಳದ್ದು ಬಂದಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವು ಹಣಕಾಸಿನ ಸಚಿವರಾಗಿ. ಯಾವುದು ಬಂದಿದೆ, ಯಾವುದು ಬಂದಿಲ್ಲ; ಎಂಬುದು ನಿಮಗೆ ಗೊತ್ತಿಲ್ಲದೆ, ನನ್ನನ್ನು ಮಾನ್ಯ ಮಲ್ಲಿಕಾರ್ಜುನ ಎಂ.ಖರ್ಗೆಯವರನ್ನು ಕೇಳುವಂತಹ ಪರಿಸ್ಥಿತಿ ನಿಮ್ಮ ಸರ್ಕಾರಕ್ಕೆ ಬಂದಿದೆ ಎಂದರೆ, ನಾನು ಹೇಳುವುದು ನಿಮ್ಮ ಪರಿಸ್ಥಿತಿಯ ಬಗ್ಗೆ....

MR.SPEAKER:- Somehow I am inclined to agree with Mr.Kharge.

ಶ್ರೀ ಸಿದ್ದರಾಮಯ್ಯ:- ಯಾರನ್ನು ಕೇಳುವಂತಹ ಪರಿಸ್ಥಿತಿ ಏನು ಇಲ್ಲ. ಬರದೆ ಇರುವಂಥಾದ್ದು ನಿರ್ವಹಣಾ ಮುಂಗಡ ಪತ್ರವನ್ನು ಸ್ವೀಕರಿಸಲಾಗಿದೆ. ಈಗ ಸಮಾಜ ಕಲ್ಯಾಣ, ವಾಣಿಜ್ಯ ಮತ್ತು ಕೈಗಾರಿಕೆ, ಆರೋಗ್ಯ, ಕಾರ್ಮಿಕ, ಇವೆಲ್ಲ ಬಂದಿವೆ. ಇನ್ನು ಬಹುತೇಕ ಇಲಾಖೆಗಳದ್ದು ಬರಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ನಾನು ಮುಖ್ಯವಾದಂತಹ

ಪ್ರಶ್ನೆಯನ್ನು ಎತ್ತಿದ್ದೆ. ನೀವು ಕೊಟ್ಟಿರುವಂಥ ಪೇಜು ನಂ.37ರಲ್ಲಿ ವಿಷಯ ಸಮಿತಿಗಳು ಯಾವ ರೀತಿ ಇರಬೇಕು, ಯಾವ ರೀತಿಯಾಗಿ ನಡೆದುಕೊಳ್ಳಬೇಕೆನ್ನುವ ಬಗ್ಗೆ ಇದೆ. ನಮಗೆ ಕೊಟ್ಟಿರತಕ್ಕಂಥ ಇಂಟ್ರಡಕ್ಷನ್ ಟು ದಿ ಬಜೆಟ್ ಪ್ರೊಸೀಜರ್‌ನಲ್ಲಿ ಹೇಗೆ ಅಡಾಪ್ಟ್ ಮಾಡಿಕೊಳ್ಳಬೇಕೆಂಬ ಬಗ್ಗೆ ಹೇಳುವಾಗ ಅದರಲ್ಲಿ ವಿಷಯ ಸಮಿತಿಗಳದ್ದು ಇದೆ. ನಂತರ ಪೇಜ್ ನಂ.45ರಲ್ಲಿ ಪರ್ಫಾಮೆನ್ಸ್ ಬಜೆಟ್ ಏಕೆ ಇಡಬೇಕು? ಯಾವ ಕಾರಣಕ್ಕೆ ಇಡಬೇಕು? ಅದರ ಉದ್ದೇಶವೇನು ಎಂಬುದು ಇದೆ. ನಾನು ಹೇಳುತ್ತಿರುವುದು ಇಷ್ಟೆ. ಸಂವಿಧಾನದಲ್ಲೂ ಕೂಡ ಆರ್ಟಿಕಲ್ 202ರಲ್ಲಿ ಹೇಳುತ್ತದೆ. ಹಣಕಾಸಿನ ವಾರ್ಷಿಕ ವರದಿ ಅಥವಾ ಫೈನಾನ್ಸ್ ಸ್ಟೇಟ್‌ಮೆಂಟ್ ಮಾಡುವಾಗ ಎಲ್ಲಾ ಗ್ರಾಂಟೆಡ್ ಡಿಟೈಲ್ಸ್ ಕೂಡ ಸದನದಲ್ಲಿಡಬೇಕು. ಇದರ ಜೊತೆಯಲ್ಲಿ ಪರ್‌ಫಾರ್ಮನ್ಸ್ ಬಜೆಟ್ ಕೂಡ ಇಡಬೇಕು. ವಾರ್ಷಿಕ ವರದಿ ಕೂಡ ಇರಬೇಕೆಂದು ಇದೆ. ಈಗ ವಾರ್ಷಿಕ ವರದಿಯಲ್ಲಿ ಮತ್ತು ಪರ್‌ಫಾರ್ಮನ್ಸ್ ಬಜೆಟ್ ಇವೆರಡು ನಮ್ಮಮುಂದೆ ಮುಖ್ಯವಾದ ದಾಖಲೆಗಳು ಇಲ್ಲದೆ ಹೋದರೆ ಸದಸ್ಯರುಗಳು ಹೇಗೆ ಅಭ್ಯಾಸ ಮಾಡಿ ಹೇಳುವುದು ಹೇಗೆ? ಯಾವುದಾದರೂ ಗಮನಸೆಳೆಯುವ ಸೂಚನೆ ಅಥವಾ ಬೇರೆ ಯಾವುದಾದರೂ ಆದರೆ ಅದಕ್ಕೆ ಉತ್ತರ ನಾಳೆ, ನಾಡಿದ್ದು ಎಂದರೆ ನಾವು ಅದನ್ನು ಒಪ್ಪುತ್ತೇವೆ. ಆದರೆ ಇಲ್ಲಿ ಚರ್ಚೆ ಪ್ರಾರಂಭವಾಗಿದೆ, ಚರ್ಚೆ ಪ್ರಾರಂಭವಾದಾಗ ಇಲ್ಲಿ ಮಾತನಾಡುವಂತಹ ಸದಸ್ಯರುಗಳು 5-10 ನಿಮಿಷಗಳು ಅಥವಾ ಅರ್ಧ ಗಂಟೆಗಳಲ್ಲಿ ಚರ್ಚೆಯನ್ನು ಮುಗಿಸಬೇಕಾಗುತ್ತದೆ. ಅವರು ಚರ್ಚೆ ಮುಗಿದ ಮೇಲೆ ನೀವು ಅದನ್ನು ಒದಗಿಸಿ ಕೊಟ್ಟರೆ ಅದರ ಮೇಲೆ ಮಾತನಾಡುವುದು ಹೇಗೆ? ಆ ಇಲಾಖೆಗಳ ಆಗು ಹೋಗುಗಳ ಬಗ್ಗೆ ಹೇಗೆ ತಿಳಿಯುತ್ತದೆ? ದಯವಿಟ್ಟು ತಾವು ಇದು ಸರಿ ಇದೆಯೆಂದು ರೂಲಿಂಗ್ ಕೊಟ್ಟರೂ ಒಪ್ಪಿಕೊಳ್ಳುತ್ತೇವೆ, ಇಲ್ಲ ಇದು ಸರಿಯಾಗಿ ಇಲ್ಲವೆಂದು ಛೀಮಾರಿ ಹಾಕಿದರೂ ನಾವು ಕುಳಿತುಕೊಳ್ಳುತ್ತೇವೆ.

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಅಧ್ಯಕ್ಷರೆ, ಇದು ಸರಿಯಾಗಿದೆ, ತಾವು ಅನುಮತಿಯನ್ನು ಕೊಟ್ಟರೆ, ಯಾವ ಇಲಾಖೆಯ ಪರ್‌ಫಾರ್ಮನ್ಸ್ ಬಜೆಟ್ ಬಂದಿದೆ ಅದನ್ನು ತಾವು ಚರ್ಚೆಗೆ ತೆಗೆದುಕೊಳ್ಳಬಹುದು. ಇದು ಮುಗಿಯುವುದರೊಳಗೆ ಇನ್ನು ಉಳಿದಂತಹ ಇಲಾಖೆಗಳ ಪರ್‌ಫಾರ್ಮನ್ಸ್ ಬಜೆಟ್ ಮತ್ತು ವಾರ್ಷಿಕ ವರದಿ ಬೇರೆಯಲ್ಲ ಟೆಕ್ನಿಕಲಿ ಬೇರೆ ಅಷ್ಟೆ in spirit, review of the entire performance of the Government during this period. ಅದರ ಬಗ್ಗೆ ಚರ್ಚೆ ಬೇಡ. ಈಗ ಯಾವ ಇಲಾಖೆಯದ್ದು ಇದೆಯೋ ಅದರ ಮೇಲೆ ತಾವು ಚರ್ಚೆಗೆ ಪರ್ಮಿಶನ್ ಕೊಟ್ಟರೆ, ಈ ಬದಲಾವಣೆಗೆ ಪರ್ಮಿಶನ್ ಕೊಟ್ಟರೆ ಅವರು ಅದರ ಮೇಲೆ ಚರ್ಚೆ ಮಾಡಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇದಕ್ಕೆ ನಾವು ಒಪ್ಪಬಹುದು. ಯಾವುದು ಪರ್‌ಫಾರ್ಮನ್ಸ್ ಬಜೆಟ್ ಇದೆಯೋ ಅದನ್ನು ಚರ್ಚೆಗೆ ತೆಗೆದುಕೊಳ್ಳಬಹುದು. ಇನ್ನು

ಉಳಿದಂತಹ ಬೇಡಿಕೆಗಳನ್ನು ಓಟಿಗೆ ಹಾಕುವ ಹಾಗೆ ಇಲ್ಲ. ಅವುಗಳಿಗೆ ಮುಂದೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು):- ಇಲ್ಲ, ಕೇಳಿ, ವಾರ್ಷಿಕ ವರದಿ, ಪರ್‌ಫಾರ್ಮೆನ್ಸ್ ಬಜೆಟ್ ವಿಷಯ ಸಮಿತಿಯಲ್ಲಿದೆ. ಟೆಕ್ನಿಕಲಿ ಬೇರೆ ಬೇರೆ ಹೆಸರುಗಳಿಂದ ಕರೆದರೂ ಕೂಡ....

ಅಧ್ಯಕ್ಷರು:- ಯಡಿಯೂರಪ್ಪನವರು, he may be an angry man, but he is a straight-froward ಏಕೆಂದರೆ, ಅವರು ಎಂದೂ ಮಹಾರಾಷ್ಟ್ರದಲ್ಲಿ ಇರಲಿಲ್ಲ.

ಶ್ರೀ ಸಿದ್ಧರಾಮಯ್ಯ:- ನಾವು ಕೂಡ ಸ್ಟೈಟ್ ಫಾರ್ವರ್ಡ್ ಆಗೇ ಇದ್ದೇವೆ.

ಅಧ್ಯಕ್ಷರು:- ಅಲ್ಲ, ಅವರು ಮೊದಲ್ಲೆಲ್ಲಾ ಮಂತ್ರಿಗಳಾಗಿದ್ದರು ನೋಡಿ, ಅವರಿಗೆ ಈ ಟ್ರಿಕ್ಸ್ ಎಲ್ಲಾ ಗೊತ್ತು, ಹೇಗೆಲ್ಲಾ ನಿಮಗೆ ಮಾಡುತ್ತಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇಲ್ಲ, ನೆನ್ನೆ ನಾವು ನೋಡಿದ್ದೇವೆ ಯಾರು ಇಲ್ಲ. ಅಂದರೆ ಸದನದಲ್ಲಿ ಏನಾಗುತ್ತದೆ ಎಂದರೆ, ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮೇಲೆ ಸಗೀರ್ ಅಹಮದ್‌ರವರು ಮಾತನಾಡುತ್ತಿದ್ದರು; ಇಲ್ಲಿ ಸದನದಲ್ಲಿ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಿನಿಸ್ಟರೂ ಇರಲಿಲ್ಲ; ನಿಮ್ಮ ಪರ್ಫಾರ್ಮೆನ್ಸ್ ಬಜೆಟೂ ಇಲ್ಲ ಎಂದರೆ ಹೇಳುವುದು ಯಾರಿಗೆ? ನೀವು ಇದನ್ನು ಅರ್ಥ ಮಾಡಿಕೊಳ್ಳಿ. ನಾವು ನಿಮ್ಮನ್ನು ಇಕ್ಕಟ್ಟಿಗೆ ಸಿಗಿಸಬೇಕು ಎಂದು ಏನಿಲ್ಲ ಅಥವಾ ಇದರಿಂದ ನಮಗೇನು ದೊಡ್ಡಸ್ಥಿಕೆ ಬರುವುದಿಲ್ಲ. ಕೊನೆಯ ಪಕ್ಷ ಆ ಡಾಕ್ಯುಮೆಂಟ್ ಇದ್ದರೆ, ತಾನೆ, ನೋಡಿ ಓದಿಕೊಂಡು, ಅವರು ಹೇಳಿದಂತೆ 1994-95ರ ಪರ್ಫಾರ್ಮೆನ್ಸ್ ಏನು 1995-96 ಪರ್ಫಾರ್ಮೆನ್ಸ್ ಏನು ಎಂದು ಕಂಪೇರ್ ಮಾಡಿ ಹೇಳಬಹುದು. ನಿಮಗೂ ಕೂಡ ಅದರಿಂದ ಗೊತ್ತಾಗುತ್ತದೆನ್ನುವ ದೃಷ್ಟಿಯಿಂದ ಆ ಪರ್ಫಾರ್ಮೆನ್ಸ್ ಬಜೆಟ್ ಅನ್ನು ಕೊಡಿ ಎಂದು ನಾವು ಕೇಳತಕ್ಕದ್ದು ಅಷ್ಟೆ, ಆದ್ದರಿಂದ ಡಾಕ್ಯುಮೆಂಟ್ಸ್ ಅನ್ನು ಕಡ್ಡಾಯವಾಗಿ ಇಡಬೇಕೆಂದು ತಮ್ಮಲ್ಲಿ ಕಡ್ಡಾಯ ಮಾಡಿದ್ದಾರೆ. It is compulsory. ಅದು ಆಪ್‌ಷನ್ ಇದ್ದಿದ್ದರೆ ಬೇಡ ಎಂದು ಹೇಳಬಹುದಾಗಿತ್ತು. ಅದಕ್ಕಾಗಿ, ಆನ್ಯುಯಲ್ ರಿಪೋರ್ಟ್‌ನ್ನು ಅದಕ್ಕೆ ಹೋಲಿಸತಕ್ಕಂಥದ್ದಲ್ಲ. ಆನ್ಯುಯಲ್ ರಿಪೋರ್ಟ್‌ನಲ್ಲಿ ಹೋದ ವರ್ಷ ನೀವು ಏನು ಮಾಡಿದಿರಿ ಎನ್ನುವುದು ಇರುತ್ತದೆಯೇ ಹೊರತು, ಅದಕ್ಕೆ ಫಿಸಿಕಲ್ ಟಾರ್ಗೆಟ್, ಫೈನಾಸಿಯಲ್ ಟಾರ್ಗೆಟ್, ಕಂಪೇರೆಟಿವ್ ಸ್ಟೇಟ್‌ಮೆಂಟ್ ಇವ್ಯಾವುವು ಇರುವುದಿಲ್ಲ. ಅದಕ್ಕೇ ಅದಕ್ಕು ಇದಕ್ಕು ಬಹಳ ವ್ಯತ್ಯಾಸವಿದೆ. ಹಿಂದೆ ನಮ್ಮ ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಕಮಿಷನ್‌ನಲ್ಲಿ ಇದಕ್ಕೆ ಒತ್ತನ್ನು ಕೊಟ್ಟ ಮೇಲೆ, ಇದನ್ನು ಎಲ್ಲಾ ಸರ್ಕಾರದವರು ಒಪ್ಪಿಕೊಂಡು, ಇದನ್ನು ಸಂವಿಧಾನದ ಅನುಚ್ಛೇದ 202ರ ಪ್ರಕಾರ ಈ ಡಾಕ್ಯುಮೆಂಟನ್ನು ಕೂಡ ಅದರಲ್ಲಿ ಸೇರಿಸಬೇಕೆಂದು ಸೇರಿಸಿ, ಇವತ್ತು

ಸದನದ ಮುಂದೆ ಇಡುತ್ತಿದ್ದಾರೆ. ಅದಕ್ಕೆ, ದಯವಿಟ್ಟು ತಾವು ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡರೆ ಇನ್ನು ಮುಂದಾದರೂ ಕೊನೆಯಪಕ್ಷ ಅವರು ಹುಷಾರ್ ಆಗಿ ಇದನ್ನು ಇಡುತ್ತಾರೆ, ಮತ್ತೆ ಸದನದ ಮುಂದೆ ಯಾವುದು ಪರ್ಫಾರ್ಮೆನ್ಸ್ ಬಜೆಟ್ ಇದೆ, ಅದನ್ನು ಮಾತ್ರ ಚರ್ಚೆ ಮಾಡೋಣ. ನಾಲ್ಕು ಬೇಡಿಕೆಗಳಿವೆ, ಆ ನಾಲ್ಕು ಬೇಡಿಕೆಗಳ ಮೇಲೆ ಇವತ್ತಿನದಿವಸ ಎಲ್ಲಾ ಸದಸ್ಯರು ಮಾತನಾಡಲಿ, ಉಳಿದಂತದ್ದಕ್ಕೆ ಪರ್ಫಾಮೆನ್ಸ್ ಬಜೆಟ್ ತಂದು ಕೊಟ್ಟ ಮೇಲೆ ಚರ್ಚೆ ಮಾಡೋಣ ಉಳಿದದ್ದನ್ನು ಮಾತ್ರ ಮುಂದಕ್ಕೆ ಹಾಕಿ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು):- ಈಗ ಸಮಾಜ ಕಲ್ಯಾಣ ಇಲಾಖೆಯಿದೆ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯದು ಇದೆ, ಆರೋಗ್ಯ ಇಲಾಖೆಯದಿದೆ, ಕಾರ್ಮಿಕ ಇಲಾಖೆಯದಿದೆ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇಲ್ಲಿ ಶಿಕ್ಷಣ ಮತ್ತು ಆರೋಗ್ಯ ಇಲಾಖೆಗೆ ಸಂಬಂಧಿಸಿದ್ದು ಬಿಟ್ಟರೆ ಮತ್ತೆ ಯಾವುದೂ ಕೂಡ ಇಲ್ಲ, ಸುಮ್ಮನೆ ಏತಕ್ಕೆ ಸಮರ್ಥನೆ ಮಾಡಿಕೊಳ್ಳುತ್ತಿದ್ದೀರಿ?

ಶ್ರೀ ಸಿದ್ದರಾಮಯ್ಯ:- ಸಮರ್ಥನೆ ಮಾಡಿಕೊಳ್ಳುತ್ತಿಲ್ಲ....

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯದು ಮಾತ್ರ ಇದೆ. ಕಾರ್ಮಿಕ ಇಲಾಖೆಯದು ಇಲ್ಲ.

ಶ್ರೀ ಸಿದ್ದರಾಮಯ್ಯ:- ಪರ್ಫಾಮೆನ್ಸ್ ಬಜೆಟ್ ಯಾವುದಕ್ಕೆ ಸಂಬಂಧಿಸಿದಂತೆ ಇಟ್ಟಿದ್ದೇವೆ ಎಂದು ಹೇಳುತ್ತಿದ್ದೇನೆ ಅಷ್ಟೆ.

ಅಧ್ಯಕ್ಷರು:- ಹಾಗೆ ಬಿಲ್‌ನಲ್ಲಿ ಪೀಸ್ ಮಾಡುವುದಕ್ಕೆ ಬರುವುದಿಲ್ಲ. ಇಷ್ಟೊಂದು ಬೇಡಿಕೆಗಳನ್ನು ಮೂವ್ ಮಾಡಿದ್ದೀರಿ. ಒಬ್ಬ ಮೆಂಬರ್ ಮಾತನಾಡುವುದಕ್ಕೆ ಅಪೇಕ್ಷೆ ಪಡತಕ್ಕಂಥವರು, he would like to make some references here and to all the departments. ಅವರು ಸೆಲೆಕ್ಟ್ ಮಾಡಿಕೊಂಡು ಆ ನಾಲ್ಕು ಇಲಾಖೆಗಳ ಮೇಲೆ ಮಾತನಾಡಿ, ಮತ್ತೆ ನಾಳೆ ಅವು ಬಂದ ಮೇಲೆ ಮತ್ತೆ ಮಾತನಾಡಬೇಕೆಂದು ಹೇಳುವುದಕ್ಕಾಗುವುದಿಲ್ಲ. This is an opportunity which the Hon.Members get once in a year. I think, ನಾನು ಈಗ ಸ್ವಲ್ಪ ಹೊತ್ತು ಅಡ್ಜರ್ನ್ ಮಾಡುತ್ತೇನೆ.

SRI M.MALLIKARJUNA KHARGE:- What made the government not to get it printed and circulate? What forced them?

MR.SPEAKER:- I think we will adjourn, for some

time.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ನಾವು ಮೂರು ಮೂರು ಗಂಟೆಗಳವರೆಗೆ ನಾವು ಕುಳಿತಿದ್ದೇವೆ. ಇದು ಹಸಿವಿನ ಪ್ರಶ್ನೆ ಅಲ್ಲ, ಏಕೆಂದರೆ, ನಾವು ಇದೇ ರೀತಿಯಾಗಿ ಒಂದೊಂದನ್ನು ಬಿಟ್ಟುಕೊಂಡು ಹೋದರೆ, because of your liberalism, they should not take advantage of it.

ಅಧ್ಯಕ್ಷರು:- ಭಾಗಶಃ ಈಗ ನೀವು ಬಂದಿರುವುದರ ಮೇಲೆ ಚರ್ಚೆ ಮಾಡೋಣವೆಂದು ಒಪ್ಪಿಕೊಂಡಿರಿ. ಅದಕ್ಕೂ ನಾನು ಒಪ್ಪಲಿಲ್ಲ. I am not liberal. I am totally in agreement with what the Hon. Leader of the opposition, you and Mr.Srirama Reddy have said.

SRI M.MALLIKARJUNA KAHARGE:- We are demanding the documents which are relevant, which are stated in the rules.

ಅಧ್ಯಕ್ಷರು:- ನಾನು ಅದಕ್ಕೆ ತಮಗೆ ಹೇಳುತ್ತಿದ್ದೇನೆ, ಮಾನ್ಯ ಪ್ರತಿಪಕ್ಷದ ನಾಯಕರು, ತಾವು ಮತ್ತು ಶ್ರೀರಾಮರೆಡ್ಡಿಯವರು ಏನು ವಿಚಾರವನ್ನು ಪ್ರಸ್ತಾಪ ಮಾಡಿದಿರಿ, ಇದರ ಜೊತೆಗೆ ನನ್ನ ಪೂರ್ಣ ಸಹಮತವಿದೆ. I am just trying to find some way. ಹೇಗೆ ಸರ್ಕಾರದವರು ಈ ಸಮಸ್ಯೆಯನ್ನು ಪರಿಹರಿಸುವುದಕ್ಕೆ ನನಗೆ ಸಹಕಾರ ಮಾಡುತ್ತಾರೆಂದು ಅಷ್ಟೆ ನಾನು ಆಲೋಚನೆ ಮಾಡುತ್ತಿದ್ದೇನೆ. ಇದನ್ನು ಅವಾಯ್ಡ್ ಮಾಡಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಅಲ್ಲ, Not that. I am not inclined for that at all. ಲಿಬರಲ್ ಎಂದರೆ, ಈ ವಿಚಾರಗಳಲ್ಲೆಲ್ಲಾ ನಾನು ಲೋಪ ಮಾಡುವುದಕ್ಕೆ ನಾನು ತಯಾರಿಲ್ಲ. If it is so, I will go down in history and I will be committing a mistake. ಇರಲಿ ಬಿಡಿ ಸಗೀರ್ ಅಹಮದ್‌ರವರೆ ಆಮೇಲೆ ಮಾತನಾಡಿಕೊಳ್ಳೋಣ. We will do one thing. We will adjourn and come back at 3.O'clock.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮೂರು ಗಂಟೆ ಎಂದರೆ, ಬೇಡಿಕೆ ಮೇಲೆ ಚರ್ಚೆ ಮಾಡುವುದಕ್ಕೆ ತಡವಾಗುತ್ತದೆ.

MR.SPEAKER:- Whatever time we lose, elsewhere I have the the responsiblity to adjust the time. Yesterday we had to sit for two hours. ನಿನ್ನೆ ನಾವು ಸುಮಾರು ಎರಡು ಗಂಟೆಗಳ ಕಲಾಪವನ್ನು ನೆಡೆಸಬೇಕಾಗಿತ್ತು ಇದೇ ಕಾರಣಕ್ಕಾಗಿ ಕಳೆದುಕೊಂಡಿದ್ದೇವೆ. ಇವತ್ತು ಒಂದು ಗಂಟೆಯನ್ನು ಕಳೆದುಕೊಂಡಿದ್ದೇವೆ. We are losing one hour. I

think I will make good this time. ಇದನ್ನು ನಿಮ್ಮ ಲೆಕ್ಕಕ್ಕೆ ಜಮೆ ಮಾಡಿ ಸಮಯ ಆಗಿದೆ ಎಂದು I won't do. You can be rest assured. I think we will adjourn and meet at 3.O'clock. ಈಗ ಸಭೆಯನ್ನು ಮುಂದೂಡಿ ಪುನಃ ಮೂರು ಗಂಟೆಗೆ ನಾವು ಸಮಾವೇಶಗೊಳ್ಳುತ್ತೇವೆ.

(ಸದನವು ಒಂದು ಗಂಟೆ ಮೂವತ್ತೈದು ನಿಮಿಷಕ್ಕೆ ಮುಂದೂಡಲ್ಪಟ್ಟು ಮಧ್ಯಾಹ್ನ ಮೂರು ಗಂಟೆಗೆ ಪುನಃ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಭೋಜನ ವಿರಾಮದ ನಂತರ ಸದನವು ಪುನಃ 4.30ಕ್ಕೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರಾದ ಶ್ರೀ ರಮೇಶ್‌ಕುಮಾರ್ ಅವರು ಪೀಠವನ್ನು ಅಲಂಕರಿಸಿದ್ದರು)

ವಿಷಯ:- ಬೇಡಿಕೆಗಳ ಪರ್‌ಫಾರ್ಮೆನ್ಸ್ ರಿಪೋರ್ಟನ್ನು ಒದಗಿಸದೆ ಇರುವುದು – (ಮುಂದುವರೆದ ಚರ್ಚೆ)

ಅಧ್ಯಕ್ಷರು:- ಹಲವಾರು ಇಲಾಖೆಗಳಿಗೆ ಸಂಬಂಧಿಸಿದಂತೆ ವಾರ್ಷಿಕ ವರದಿಗಳನ್ನು ಕೊಡುವ ವಿಚಾರದಲ್ಲಿ ಮತ್ತು ನಿರ್ವಹಣಾ ಮುಂಗಡ ಪತ್ರವನ್ನು ಮಾನ್ಯ ಸದಸ್ಯರುಗಳಿಗೆ ಒದಗಿಸುವಲ್ಲಿ ಸರ್ಕಾರದ ವತಿಯಿಂದ ಗಂಭೀರವಾದ ಲೋಪವಾಗಿದೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಯಾವುದೇ ಕಾರಣದಿಂದ ಮಾನ್ಯ ಸದಸ್ಯರುಗಳ ಹಕ್ಕಿಗೆ ಚ್ಯುತಿ ಬರಬಾರದು, ಅವರು ಸಕ್ರಿಯವಾಗಿ ಚರ್ಚೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂವಿಧಾನಬದ್ಧವಾಗಿ, ನಿಯಮಾನುಸಾರ ಅವರಿಗೆ ಒದಗಿಸಬೇಕಾಗಿರತಕ್ಕ ಎಲ್ಲಾ ಮಾಹಿತಿಗಳನ್ನೂ ಒದಗಿಸತಕ್ಕದ್ದು ಸರ್ಕಾರದ ಆದ್ಯ ಕರ್ತವ್ಯ. ಈ ಲೋಪ ಮುಂದುವರೆಯಬಾರದು ಎಂಬ ಒಂದು ಸರ್ಕಾರದ ಸೂಚನೆಯನ್ನು ಸರ್ಕಾರದವರಿಗೆ ನಾನು ಕೊಡಬಯಸುತ್ತೇನೆ. ದಯವಿಟ್ಟು ಎಲ್ಲಾ ಮಾನ್ಯ ಸದಸ್ಯರುಗಳು ಸಹಕರಿಸಬೇಕು. ಈಗಾಗಲೇ ನಾವು ಸಾಕಷ್ಟು ಸಮಯವನ್ನು ಕಳೆದಿದ್ದೇವೆ. ಆ ಕಾರಣದಿಂದ ಗುರುವಾರದ ದಿವಸ ಬೇಡಿಕೆಗಳ ಮೇಲಿನ ಚರ್ಚೆಗೆ ಸರ್ಕಾರದಿಂದ ಕೊಡಬೇಕಾಗಿದ್ದ ಉತ್ತರವನ್ನು ನಾವು ಮುಂದಕ್ಕೆ ಹಾಕಿದ್ದೇವೆ. ನಾಳೆ ಮತ್ತು ಗುರುವಾರ ಮತ್ತೆ ಚರ್ಚೆಯನ್ನು ಮುಂದುವರೆಸುತ್ತೇವೆ. ಮಂಗಳವಾರ ಚರ್ಚೆಯನ್ನು ಮುಂದುವರೆಸುತ್ತೇವೆ. ಬುಧವಾರ ಈ ಬೇಡಿಕೆಗಳ ಮೇಲೆ ಸರ್ಕಾರದಿಂದ ಉತ್ತರ ಪಡೆದುಕೊಳ್ಳೋಣ. ದಯಮಾಡಿ ಎಲ್ಲರೂ ಸಹಕರಿಸಬೇಕೆಂದು ನನ್ನ ವಿನಂತಿ.

ಶ್ರೀ ಎಂ.ಮಲ್ಲಿಕಾರ್ಜುನ್ ಖರ್ಗೆ:- ಮಾನ್ಯ ಅಧ್ಯಕ್ಷರೇ, ನಾವು ಎತ್ತಿದಂತಹ ಕ್ರಿಯಾಲೋಪ ಏನಿತ್ತು, ಅದು ಉದ್ದೇಶ ಪೂರ್ವಕವಾಗಿ ಈ ಸದನದ ಸಮಯವನ್ನು ಹಾಳು ಮಾಡಬೇಕು ಎನ್ನತಕ್ಕಂತಹ ದೃಷ್ಟಿಯಿಂದ ಅಲ್ಲ, ಒಂದು ಸದುದ್ದೇಶದಿಂದ ಮತ್ತು ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ಮಂತ್ರಿಗಳೂ ಕೂಡ ಎಚ್ಚರ ಇರಬೇಕು. ಏಕೆಂದರೆ ಕನಿಷ್ಟ ಅವರವರ ಇಲಾಖೆಯ, ಅವರ ಪರ್‌ಫಾರ್ಮೆನ್ಸ್ ಅವರಿಗೆ ಗೊತ್ತಿಲ್ಲವೆಂದರೆ ಸದನದ ಸದಸ್ಯರಿಗೆ ತಿಳಿಸುವುದು ಹೇಗೆ? ನಾವು ಜನರಿಗೆ ತಿಳಿಸುವುದು